





ಯಶ್, ದರ್ಶನ್, ಸುದೀಪ್: ಕನ್ನಡ ಚಿತ್ರರಂಗದ ಸಂಕಷ್ಟಕ್ಕೆ ಅತೀತರೆ?

ಶಿವರಾಜ್‌ಕುಮಾರ್: ಚಿತ್ರರಂಗದಲ್ಲಿನ ನಾಯಕತ್ವದ ಕೊರತೆಗೆ ಉತ್ತರವಾಗುವರೆ?



## ಹಬ್ಬವಾಗಲಿ ತಾರೆಗಳ ಸಿನಿಮಾ

ಪ್ರಸ್ತುತ ಸಂದರ್ಭದಲ್ಲಿನ ಚಿತ್ರೋದ್ಯಮದ ವಹಿವಾಟನ್ನು ಅರ್ಥ ಮಾಡಿಸುವ ಪ್ರಯತ್ನವೂ ಚೈತ್ರಾ ಅವರ ಈ ಮಾತಿನಲ್ಲಿ ಇತ್ತು: 'ತೆಲುಗಿನಲ್ಲಿ ಆರ್‌ಆರ್‌ಆರ್ ಸಿನಿಮಾ ಬಂತಲ್ಲ. ಅದನ್ನು ನಮ್ಮ ರಾಜ್ಯದ ಎಲ್ಲ ಚಿತ್ರಮಂದಿರಗಳ ಮಾಲೀಕರೂ ತೋರಿಸಲು ತುದಿಗಾಲಲ್ಲಿ ನಿಂತಿದ್ದರಲ್ಲವೆ? ಎಲ್ಲರೂ ಕನ್ನಡಕ್ಕೆ ಡಬ್ ಆದ ಆವೃತ್ತಿಯನ್ನೇನೂ ತೆರೆಮೇಲೆ ಹಾಕಲಿಲ್ಲವಲ್ಲ. ಮಲೆಯಾಳಂನ 'ಆವೇಶಂ' ಸಿನಿಮಾಗೆ ಕನ್ನಡದ ಪ್ರೇಕ್ಷಕರಿಂದ ದೊಡ್ಡ ಮೊತ್ತದ ಟಿಕೆಟ್ ದರ ಸಂದಾಯವಾಗಿದೆ. ಯಾವುದೇ ಭಾಷೆಯ ದೊಡ್ಡ ಸಿನಿಮಾ ಬಂದರೂ ಕರ್ನಾಟಕದಿಂದ ಒಳ್ಳೆಯ ಷೇರ್ ಕೊಡುತ್ತಾ ಇದ್ದೇವೆ. ಇದರ ಅರ್ಥ ಕಂಟೆಂಟ್ ಕೊಡುವ ಸಾಮರ್ಥ್ಯಕ್ಕೆ ಇವತ್ತು ದೊಡ್ಡ ಮಟ್ಟದ ಸವಾಲು ಎದುರಲ್ಲಿ ಇದೆ.'

ಸಿನಿಮಾ ತಯಾರಿಯಲ್ಲಿ ಸಂಗೀತ, ಸಂಕಲನ, ಗ್ರೇಡಿಂಗ್, ಪ್ರಚಾರ ಇವೆಲ್ಲವೂ ಮೊದಲಿಗಿಂತ ಹೆಚ್ಚು ವೃತ್ತಿಪರತೆಯನ್ನು ಈಗ ಬಯಸುತ್ತಿವೆ ಎಂದು ಅಭಿಪ್ರಾಯಪಡುವ ಚೈತ್ರಾ, ತಾರಾ ನಟರಿಗೆ ವರ್ಷಕ್ಕೆ ಇಷ್ಟೇ ಸಿನಿಮಾ ಮಾಡಿರೆಂದು ಹೇಳಲು ಸಾಧ್ಯವಿಲ್ಲ ಎಂದರು.

ತಾರಾ ನಟರು ಒಂದೊಂದು ಹಬ್ಬದ ಸಂದರ್ಭದಲ್ಲೂ ತಮ್ಮ ಒಂದೊಂದು ಸಿನಿಮಾ ಬರುವಂತೆ ಯೋಜಿಸಿದರೆ ಸತತವಾಗಿ ಚಿತ್ರಮಂದಿರಗಳಿಗೆ ಜನರು ಬರುವ ಸಾಧ್ಯತೆಯೊಂದನ್ನು ಅವರು ಸಲಹೆಯ ರೂಪದಲ್ಲಿ ಕೊಟ್ಟರು.

ರಾಜ್‌ಶೆಟ್ಟಿ, ಹೇಮಂತ್ ರಾವ್, ತರುಣ್ ಸುಧೀರ್, ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ ಇವರೆಲ್ಲರ ಕಾರ್ಯವೈಖರಿ ಭಿನ್ನವಾಗಿದೆ. ಹೀಗಾಗಿ ಸಿನಿಮಾ ಮಾಡಲು ಇವರೆಲ್ಲ ತೆಗೆದುಕೊಳ್ಳುವ ಅವಧಿ ಬೇರೆ ಬೇರೆಯದೇ ಆಗಿರುತ್ತದೆ ಎಂದು ವಸ್ತುಸ್ಥಿತಿಯ ಮೇಲೆ ಚೈತ್ರಾ ಬೆಳಕು ಚೆಲ್ಲಿದರು.

ಎನ್.ಎಂ. ಸುರೇಶ್ ಹಾಗೂ ಭಾ.ಮ. ಹರೀಶ್ ಪ್ರದರ್ಶಕರು, ವಿತರಕರ ಅಳಲನ್ನು ಹೇಳಿಕೊಂಡರೆ, ಚೈತ್ರಾ ತೆರೆದಿಟ್ಟಿದ್ದು ಹೊಸಕಾಲದ ಸವಾಲುಗಳನ್ನು. ಏಕಪರದೆಯ ಚಿತ್ರಮಂದಿರಗಳನ್ನೂ ಮಾಲ್‌ಗಳಲ್ಲಿ ಇರುವಂತೆ ರೂಪಾಂತರ ಮಾಡುವ ಕೆಲಸವನ್ನು ಎಷ್ಟೋ ಮಾಲೀಕರು ಮಾಡಿರುವುದನ್ನು ಅವರು ಶ್ಲಾಘಿಸಿದರು. ಚಿತ್ರಮಂದಿರಗಳಲ್ಲಿ ಒಳ್ಳೆಯ ಅಕೌಸ್ಟಿಕ್ಸ್, ಅಚ್ಚುಕಟ್ಟಾದ ಆಸನ ವ್ಯವಸ್ಥೆ ಇವೆಲ್ಲವೂ ಬಂದರೆ ಅವುಗಳಿಗೂ ಉಳಿಗಾಲ ಇದೆ ಎನ್ನುವುದು ಅವರ ಆಶಾಭಾವ.

'ಒನ್‌ಸ್ಟಾಪ್ ಡೆಸ್ಟಿನೇಷನ್ ತರಹ ಆಗಿರುವ ಮಾಲ್‌ಗಳು ಹೆಚ್ಚು ಹಣವನ್ನು ಬೇಡುತ್ತಿರುವುದು ಬರೀ ಸಿನಿಮಾ ಒಂದರಿಂದಲೇ ಅಲ್ಲ ಅಲ್ಲವೇ' ಎಂಬ ಅರ್ಥಪೂರ್ಣ ಪ್ರಶ್ನೆಯನ್ನೂ ಚೈತ್ರಾ ಮುಂದಿಟ್ಟರು.

'ಮೂರನೇ ಕೃಷ್ಣಪ್ಪ', 'ಶಾಖಾಹಾರಿ', 'ಕೆರೆಬೇಟೆ' ಇವೆಲ್ಲವೂ ಇತ್ತೀಚೆಗೆ ಬಂದ ಒಳ್ಳೆಯ ಕನ್ನಡ ಚಿತ್ರಗಳು. ಇವಕ್ಕೆಲ್ಲ ಪ್ರದರ್ಶಕರೂ ಬೆಂಬಲ ನೀಡಬೇಕು ಎಂದು ಚರ್ಚೆಯನ್ನು ಮುಂದುವರಿಸಲು ಹೊಸ ಪಾಯಿಂಟನ್ನು ಕೂಡ ಹೊಸ ನಟಿ ಹಾಕಿದರು.

***

ಚಿತ್ರಮಂದಿರಗಳಿಗೆ ಬರಲು ಪ್ರೇಕ್ಷಕರನ್ನು ಉತ್ತೇಜಿಸುವ ಬಗ್ಗೆ ಕನ್ನಡ ಚಿತ್ರರಂಗದಲ್ಲಿ ನಿಧಾನವಾಗಿಯಾದರೂ ಚರ್ಚೆಗಳು ನಡೆಯುತ್ತಿವೆ. ಈ ಚರ್ಚೆಗಳು ಮತ್ತಷ್ಟು ಹೆಚ್ಚಿ, ಮಾತು ಕೃತಿಯ ರೂಪ ಪಡೆದರೆ ಚಿತ್ರೋದ್ಯಮದ ನಾಳೆಗಳಲ್ಲಿ ಕೊಂಚವಾದರೂ ಲವಲವಿಕೆ ಕಾಣಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in